# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಶಹಬಾದ

**CC No: 262/2020**

CW : 1 PW: 1

| | | |
|---|---|---|
| ಹೆಸರು | : | ಸಿದ್ದಲಿಂಗಯ್ಯ |
| ತಂದೆಯ ಹೆಸರು | : | ಗುರುಪಾದಯ್ಯ ಮಠಪತಿ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ನಿವೃತ್ತ ಶಿರಸ್ತೆದಾರರು |
| ಸ್ಥಳ | : | ಕಲಬುರಗಿ |

**(ದಿನಾಂಕ: 06-01-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಮುಖ್ಯ ವಿಚಾರಣೆ: ಸ.ಸ.ಅ ವಕೀಲರಿಂದ**

ನಾನು 2013 ನೇ ಸಾಲಿನಿಂದ 2019 ಸಾಲಿನವರೆಗೆ ಶಹಾಬಾದನಲ್ಲಿ ಆಹಾರ ನಿರೀಕ್ಷಕರು ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ. ಲಕ್ಷ್ಮಿ ಗಂಜ ಏರಿಯಾದಲ್ಲಿ ದಿನಾಂಕ: 05-09-2019 ರಂದು ಪಡಿತರ ಚೀಟಿದಾರರಿಗೆ ವಿತರಿಸುವ ಅಹಾರ ಧಾನ್ಯವನ್ನು ಕಾಳ ಸಂತೆಯಲ್ಲಿ ಇಟ್ಟಿರುತ್ತಾರೆ ಅಂತಾ ಕೇಳಿ ಗೊತ್ತಾಗಿ ಜಪ್ತಿ ಪಡಿಸಿಕೊಂಡು ಸರ್ಕಾರಿ ಗೊದಾಮಿಗೆ ಹಸ್ತಾಂತರಿಸಿರುತ್ತೇವೆ. ಪಿರ್ಯಾದಿಯನ್ನು ನಾನು ಸಲ್ಲಿಸಿರುತ್ತೇನೆ. ಸಾಕ್ಷಿಗೆ ಪಿರ್ಯಾದಿಯನ್ನು ತೋರಿಸಲಾಗಿ ಸಾಕ್ಷಿಯು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸ.ಸ. ಅಭಿಯೋಜಕರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)**

**ಪಾಟೀ ಸವಾಲು: ಸ.ಸ. ಅಭಿಯೋಜಕರಿಂದ**

ದಿಃ 05-09-2019 ರಂದು ಬೆಳಿಗ್ಗೆ ಜಿಲ್ಲಾಧಿಕಾರಿಯವರು ಕಲಬುರಗಿರವರು ಶಹಾಬಾದನ ನಗರದ ಲಕ್ಷ್ಮೀ ಗಂಜ್ ಏರಿಯಾದಲ್ಲಿರುವ ಆರೋಪಿ ಮನೆಯಲ್ಲಿ ಪಡಿತರ ಆಹಾರ ಧಾನ್ಯವನ್ನು ಶೇಖರಿಸಿಟ್ಟಿರುತ್ತಾರೆ ದಾಳಿ ಮಾಡಿ ಕ್ರಮ ಜರುಗಿಸಿ ಅಂತಾ ಮೌಖಿಕ ಅದೇಶದ ಮೇರೆಗೆ ಚಾಸಾ-4 ರವರು ಶಹಾಬಾದಗೆ ಬಂದಾಗ ಮಾನ್ಯ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಖಚಿತ ಮಾಹಿತಿ ಪಡೆದುಕೊಂಡು ಚಾಸಾ-4 ರವರ ಮಾಹಿತಿಯನ್ನು ಶಹಾಬಾದನ ನಗರ ಪೊಲೀಸ ಠಾಣೆಯ ಪಿ. ಆಯ್ ಚಾಸಾ-13 ಮತ್ತು ಅವರು ಸಿಬ್ಬಂದಿರವರಾದ ಚಾಸಾ-6 ರಿಂದ 9 ಮತ್ತು ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಒಂದು ಖಾಸಗಿ ವಾಹನದಲ್ಲಿ ಕುಳಿತುಕೊಂಡು ಮಧ್ಯಾಹ್ನ 12-00 ಗಂಟೆಗೆ ಶಹಾಬಾದ ನಗರದ ಲಕ್ಷ್ಮಿ ಗಂಜ್ ಏರಿಯಾದಲ್ಲಿರುವ ಆರೋಪಿತನ ಮನೆಗೆ ಹೋಗಿ ದಾಳಿ ಮಾಡಿದಾಗ ನೆಲಮಹಡಿಯ ಒಂದು ಕೋಣೆಯಲ್ಲಿ ಹಾಗೂ ಒಂದನೇ ಮಹಡಿಯ ಕೋಣೆಯಲ್ಲಿ

ಹೋಗಿ ಪರಿಶೀಲಿಸಲಾಗಿ ಇತರೇ ಪ್ಲಾಸ್ಟಿಕ ಗೋಣಿ ಚೀಲಗಳಲ್ಲಿ ಅಕ್ಕಿ ತುಂಬಿದ್ದು ಇರುತ್ತದೆ ಅಂದರೆ ಸರಿ. ಅದರಂತೆ ಗೋಣಿ ಚೀಲದಲ್ಲಿ ತೊಗರಿ ಬೆಳೆ ಹಾಗೂ ಗೋಧಿ ತುಂಬಿದ ಚೀಲಗಳು ಇದ್ದು, ಸದರಿ ಪಡಿತರ ಆಹಾರ ಧಾನ್ಯ ತೂಕ ಮಾಡಲಾಗಿ 1) 71 ಕ್ವಿಂಟಲ್ ಅಕ್ಕಿ, 2) 2 ಕ್ವಿಂಟಲ್ 58 ಕೆ. ಜಿ ಗೋಧಿ, 3) 1 ಕ್ವಿಂಟಲ್ 26 ಕೆ. ಜಿ ತೊಗರಿ ಬೆಳೆ ಪಡಿತರ ಆಹಾರ ಧಾನ್ಯಗಳು ಶೇಖರಿಸಿಟ್ಟಿದ್ದನ್ನು ಚಾಸಾ-2 ಮತ್ತು 3 ರವರ ಸಮಕ್ಷಮ 12-00 ರಿಂದ 03-30 ರವರೆಗೆ ಜಪ್ತಿ ಪಡಿಸಿಕೊಂಡು ಸದರಿ ಆಹಾರ ಧಾನ್ಯ ಹಾಳಾಗುವ ಸಂಬಂವ ಇರುವದರಿಂದ ಸುರಕ್ಷತೆಗಾಗಿ ಕೆ.ಎಪ.ಸಿ.ಎಸ್.ಸಿ ಸಗಟು ಗೊದಾಮ ಶಹಾಬಾದರವರಲ್ಲಿ ಜಮಾ ಮಾಡಿ ರಸೀದಿ ಪಡೆದುಕೊಳ್ಳಲಾಗಿದೆ. ಜಪ್ತಾದ ಆಹಾರ ಧಾನ್ಯಗಳಿಂದ ಪ್ರತ್ಯೇಕವಾಗಿ ಒಂದೊಂದು ಕೆ. ಜಿ ಅಹಾರ ಧಾನ್ಯವನ್ನು ಸ್ಯಾಂಪಲ್ ತೆಗೆದುಕೊಂಡು ತಜ್ಞರ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿರುತ್ತೇನೆ ಅಂದರೆ ಸರಿ. ಸಾಕ್ಷಿಯು ಸದರಿ ಸ್ಯಾಂಪಲ್‌ಗಳನ್ನು ನೋಡುತ್ತಿದ್ದು, ಅವುಗಳನ್ನು ಒಟ್ಟಾರೆಯಾಗಿ ಮು. ಮಾ-1 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಸಿ.ಎಸ್.ಪಿ. ವಕೀಲರಿಂದ :</u>**

ನಮ್ಮ ಕಚೇರಿಯಿಂದ ಗುನ್ನಾ ಸ್ಥಳ 30 ಕಿ. ಮೀ ಅಂತದಲ್ಲಿ ಇದೆ. ಲಕ್ಷ್ಮೀ ಗಂಜ್ ಏರಿಯಾದಲ್ಲಿ ಸಾಕಷ್ಟು ಮನೆಗಳು ಇವೆ ಅಂದರೆ ಸರಿ. ಗುನ್ನಾ ಸ್ಥಳಕ್ಕೆ ನಿಮ್ಮ ಕಚೇರಿಯಿಂದ ಬರುವ ಖಾಸಗಿ ವಾಹನ ಯಾವುದು ಹಾಗೂ ಅದರ ನಂಬರ್ ಎಷ್ಟು ಇರುತ್ತದೆ ಅಂದರೆ ಸಾಕ್ಷಿಯು ತಾನು ಮೋಟರ್ ಸೈಕಲ ಮೇಲೆ ಬಂದಿರುವುದಾಗಿ ನುಡಿಯುತ್ತಾರೆ. ನಿಪಿ-1 ರಲ್ಲಿ ಮೋಟರ್ ಸೈಕಲ ಮೇಲೆ ಬಂದಿರುವುದಾಗಿ ಬರೆದಿರುತ್ತೀರಿಯೇ ಅಂದರೆ ಸಾಕ್ಷಿಯು ಇಲ್ಲ ಎಂದು ಹೇಳುತ್ತಾರೆ. ಮೋಟರ್ ಸೈಕಲ್ ಮೇಲೆ ಬಂದಿರುವುದಾಗಿ ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಅಂದರೆ ಸರಿ. ನಮ್ಮ ಕಚೇರಿಯಿಂದ 11-00 ಕ್ಕೆ ಬಿಟ್ಟಿರುತ್ತೇವೆ. ನಿಪಿ-1 ರಲ್ಲಿ 11-00 ಕ್ಕೆ ಕಚೇರಿ ಬಿಟ್ಟಿರುವುದಾಗಿ ನಮೂದಿಸಿರುವುದಿಲ್ಲ ಅಂದರೆ ಸರಿ. ಸಾಕ್ಷಿಗೆ ತಾವು ಮೊದಲಿಗೆ ಗುನ್ನಾ ಸ್ಥಳಕ್ಕೆ ಬಂದಿರುತ್ತೀರಾ ಅಥವಾ ಪೋಲಿಸ್ ಠಾಣೆಗೆ ಬಂದಿರುತ್ತೀರಿ ಅಂದರೆ ಸಾಕ್ಷಿಯು ಗುನ್ನಾ ಸ್ಥಳಕ್ಕೆ ಬಂದಿರುವುದಾಗಿ ನುಡಿಯುತ್ತಾರೆ. ಲಕ್ಷ್ಮೀ ಗಂಜ್ ಏರಿಯಾದಲ್ಲಿ ಅಂದಾಜು 50 ರಿಂದ 60 ಮನೆಗಳು ಇವೆ. ಗುನ್ನಾ ಸ್ಥಳವನ್ನು ಯಾರು ತೋರಿಸಿರುತ್ತಾರೆ ಅಂದರೆ ಸಾಕ್ಷಿಯು ಸಾರ್ವಜನಿಕರು ತೋರಿಸಿರುವುದಾಗಿ ನುಡಿಯುತ್ತಾರೆ. ಪಂಚನಾಮೆ ಬರೆಯಲು ಅಕ್ಕ ಪಕ್ಕದ ಜನರನ್ನು ಸಾಕ್ಷಿದಾರರನ್ನಾಗಿ ಪಡೆದುಕೊಂಡಿರುತ್ತಿರಿಯೆ ಅಂದರೆ ಸಾಕ್ಷಿಯು ಇಲ್ಲ ಎಂದು ಹೇಳುತ್ತಾರೆ. ನಿಪಿ-1 ರಲ್ಲಿ ಆರೋಪಿತನ ಮನೆ ನಂಬರ್ ಬರೆಸಿರುವುದಿಲ್ಲ ಅಂದರೆ ಸರಿ.ಗುನ್ನಾ ಸ್ಥಳದಿಂದ ಆಹಾರ ಧಾನ್ಯಗಳನ್ನು

ಜಪ್ತಿಮಾಡಿಕೊಂಡು ಸರ್ಕಾರಿ ಗೊದಾಮಿಗೆ ಕಳುಸಿಕೊಟ್ಟಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಮಾಡುವ ಕಾಲಕ್ಕೆ ಅಂದಾಜು 7 ರಿಂದ 8 ಜನರು ಹಾಜರು ಇದ್ದರು. ಗುನ್ಹಾ ಸ್ಥಳಕ್ಕೆ ಭೇಟಿ ನೀಡದೇ ನಮ್ಮ ಕಚೇರಿಯಲ್ಲಿಯೇ ಕುಳಿತುಕೊಂಡು ನಮ್ಮ ಜಿಲ್ಲಾಧಿಕಾರಿಯವರಿಗೆ ಸಹಾಯ ಮಾಡಲು ಖೊಟ್ಟಿ ಪಂಚನಾಮೆಯನ್ನು ಹಾಗೂ ಖೊಟ್ಟಿ ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಆರೋಪಿ ಹಾಗೂ ಮುದ್ದೆ ಮಾಲಿಗೆ ಯಾವುದೇ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ಸಹಾಯಕ ಸರ್ಕಾರಿ ಅಭಿಯೋಜಕರವರು ಪಾಟೀ ಸವಾಲಿನಲ್ಲಿ ಕೇಳಿದ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಅಂದರೆ ಸರಿಯಲ್ಲ. ಮು. ಮಾ-1 ನ್ನು ನೋಡಿ ಗುರುತಿಸಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇರುವುದಿಲ್ಲ**
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೆ. ಸರಿ ಇದೆ.**
**-Sd-**
**ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ.**
**ನ್ಯಾಯಾಧೀಶರು, ಶಹಬಾದ.**